
## ಯುವಚೇತನ



# ಭಾರತೀಯ ಯುವಕರಿಗೆ ಸ್ವಾಮೀಜಿ ನೀಡಿದ ಕರೆ

‘‘ನಮ್ಮ ಏಕಮಾತ್ರ ಸಮಾನ ಭೂಮಿಕೆಯೆಂದರೆ ಹಿಂದಿನಿಂದ ಬಂದ ಪವಿತ್ರ ಪರಂಪರೆ ಮತ್ತು ಧರ್ಮ. ಅದೊಂದೇ ಏಕಮಾತ್ರ ಸಾಧಾರಣ ಭೂಮಿ. ಅದರ ಮೇಲೆ ಮಾತ್ರ ನಮ್ಮ ರಾಷ್ಟ್ರವನ್ನು ನಿರ್ಮಿಸುವುದು ಸಾಧ್ಯ. ಯೂರೋಪಿನಲ್ಲಿ ರಾಜನೀತಿಯ ಭಾವನೆ ಜನಾಂಗದ ಏಕತೆಗೆ ಕಾರಣ. ಏಷ್ಯಾಖಂಡದಲ್ಲಿ ಧಾರ್ಮಿಕ ಆದರ್ಶಗಳು ಜನಾಂಗದ ಏಕತೆಗೆ ಮೂಲ. ಭವಿಷ್ಯದ ಭಾರತದ ಸಂಘಟನೆಗೆ ಧಾರ್ಮಿಕ ಏಕತೆ ಮೊದಲನೆಯ ಆವಶ್ಯಕತೆ. ಭರತಖಂಡದ ಆದ್ಯಂತವು ಒಂದು ಧರ್ಮವನ್ನೊಪ್ಪಿಕೊಳ್ಳಬೇಕು. ಒಂದು ಧರ್ಮವೆಂದರೆ ಏನು? ಕ್ರೈಸ್ತರು, ಮಹಮ್ಮದೀಯರು, ಬೌದ್ಧರು ತಿಳಿದುಕೊಂಡಿರುವಂತಹ ಒಂದು ಧರ್ಮವಲ್ಲ. ನಮ್ಮ ವಿಭಿನ್ನ ಸಂಪ್ರದಾಯಗಳಲ್ಲಿ, ಅವರವರ ಸಿದ್ಧಾಂತಗಳು ಪರಸ್ಪರ ಎಷ್ಟೇ ವಿರುದ್ಧವಾಗಿರಲಿ, ಅವುಗಳಲ್ಲೆಲ್ಲಾ ಒಂದು ಸರ್ವಸಾಮಾನ್ಯ ತಳಹದಿ ಇದೆ. ಈ ಧರ್ಮಗಳಲ್ಲಿ ಕೆಲವು ಸಾಮಾನ್ಯ ಭೂಮಿಕೆಗಳು ಇವೆ. ಅವುಗಳ ಪರಿಧಿಯಲ್ಲಿ ಈ ನಮ್ಮ ಧರ್ಮವು ಅನಂತ ವೈವಿಧ್ಯವನ್ನು ಒಪ್ಪಿಕೊಳ್ಳುತ್ತದೆ. ಅನಂತವಾದ ಆಲೋಚನಾ ಸ್ವಾತಂತ್ರ್ಯವನ್ನೂ ತಮ್ಮದೇ ರೀತಿಯಲ್ಲಿ ಜನರು ಬಾಳುವ ಅವಕಾಶವನ್ನೂ ಅದು ಒಪ್ಪಿಕೊಳ್ಳುತ್ತದೆ. ನಮಗೆಲ್ಲಾ ಇದು ಗೊತ್ತಿದೆ. ನಮ್ಮಲ್ಲಿ ಯಾರು ಸ್ವಲ್ಪ ಆಲೋಚನೆ ಮಾಡಬಲ್ಲರೋ ಅವರಿಗಾದರೂ ಇದು ಗೊತ್ತಿದೆ. ಪ್ರಾಣಶಕ್ತಿಯನ್ನು ನೀಡುವ ನಮ್ಮ ಧರ್ಮದ ಈ ಸರ್ವಸಾಮಾನ್ಯ ತತ್ತ್ವಗಳನ್ನು ಎಲ್ಲರಿಗೂ ಪ್ರಚಾರಮಾಡಬೇಕಾಗಿದೆ. ಈ ದೇಶದಲ್ಲಿರುವ ಸ್ತ್ರೀ, ಪುರುಷ, ಮಕ್ಕಳೆಲ್ಲರೂ ಇದನ್ನು ತಿಳಿದುಕೊಳ್ಳಲಿ, ತಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರಲಿ. ಇದೇ ನಮ್ಮ ಪ್ರಥಮ ಕರ್ತವ್ಯ. ಆದುದರಿಂದ ಇದನ್ನು ನಾವು ಸಾಧಿಸಬೇಕು.

‘‘ಏಷ್ಯಾಖಂಡದಲ್ಲಿ, ಅದರಲ್ಲೂ ಭರತಖಂಡದಲ್ಲಿ ಜನಾಂಗ, ಭಾಷೆ, ಸಮಾಜ, ದೇಶ ಇವುಗಳಿಗೆ ಸಂಬಂಧಪಟ್ಟ ಜಟಿಲ ಸಮಸ್ಯೆಗಳೆಲ್ಲಾ ಧಾರ್ಮಿಕ ಸಂಘಟನಾ ಶಕ್ತಿಯ ಎದುರಿಗೆ ಮಾಯವಾಗುವುದನ್ನು ನೋಡುವೆವು. ಭಾರತೀಯ ಮನಸ್ಸಿಗೆ ಧಾರ್ಮಿಕ ಆದರ್ಶಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ ಎಂಬುದನ್ನು ನಾವು ಬಲ್ಲೆವು. ಧರ್ಮವೇ ಭಾರತ ಜೀವನದ ಮೂಲ ಮಂತ್ರ. ಎಲ್ಲಿ ವಿರೋಧವು ಅತಿ ಅಲ್ಪವಾಗಿರುವುದೋ ಅಲ್ಲಿ ಮಾತ್ರ ನಾವು ಕೆಲಸಮಾಡುವುದು ಸಾಧ್ಯ. ಭರತಖಂಡದಲ್ಲಿ ಧಾರ್ಮಿಕ ಆದರ್ಶವೇ ಸರ್ವೋಚ್ಚ ಆದರ್ಶವೆಂಬುದು ಸತ್ಯ ಮಾತ್ರವಲ್ಲ; ಇಲ್ಲಿ ಕೆಲಸಮಾಡುವುದಕ್ಕೆ ಇರುವುದು ಅದೊಂದೇ ಮಾರ್ಗ. ಅದನ್ನು ಮೊದಲು ಬಲಗೊಳಿಸದೆ ಬೇರಾವ ಮಾರ್ಗದಿಂದ ನಾವು ಪ್ರಯತ್ನಿಸಿದರೂ ಅದು ವಿನಾಶಕಾರಿಯಾಗುತ್ತದೆ. ಆದುದರಿಂದ ಭವಿಷ್ಯ ಭಾರತದ ನಿರ್ಮಾಣಕ್ಕೆ ಮೊದಲ ಹಂತವೆಂದರೆ ಧಾರ್ಮಿಕ ಏಕತೆಯನ್ನು ಸಾಧಿಸುವುದು. ಹಿಂದೂಗಳಾದ ನಾವು ದ್ವೈತಿಗಳಾಗಲೀ, ವಿಶಿಷ್ಟಾದ್ವೈತಿಗಳಾಗಲೀ, ಅದ್ವೈತಿಗಳಾಗಲೀ, ಶೈವರಾಗಲೀ, ವೈಷ್ಣವರಾಗಲೀ, ಪಾಶುಪತರಾಗಲೀ, ಯಾವ ವಿಭಿನ್ನ ಸಂಪ್ರದಾಯಕ್ಕೆ ಸೇರಿದ್ದರೂ ಎಲ್ಲರಿಗೂ ಸಮಾನವಾದ ಕೆಲವು ಭಾವನೆಗಳಿವೆ ಎಂಬುದನ್ನು ತಿಳಿದುಕೊಳ್ಳಬೇಕು. ನಮ್ಮ ಹಿತಕ್ಕೆ, ನಮ್ಮ ದೇಶದ ಹಿತಕ್ಕೆ, ನಮ್ಮಲ್ಲಿರುವ ವೈಮನಸ್ಸಗಳನ್ನು ಮತ್ತು ಭಿನ್ನಾಭಿಪ್ರಾಯಗಳನ್ನು ಮರೆಯುವ ಸಮಯ ಸನ್ನಿಹಿತವಾಗಿದೆ. ಈ ಮನಸ್ತಾಪ ಸಂಪೂರ್ಣವಾಗಿ ತಪ್ಪು ಎಂಬುದನ್ನು ಖಂಡಿತವಾಗಿ ತಿಳಿದುಕೊಳ್ಳಿ. ನಮ್ಮ ಶಾಸ್ತ್ರಗಳು ಇದನ್ನು ನಿಷೇಧಿಸುವುವು. ನಮ್ಮ ಪೂರ್ವಿಕರು ಇದನ್ನು ನಿಷೇಧಿಸುವರು. ಯಾವ ಮಹಾಪುರುಷರ ಕುಲಕ್ಕೆ ನಾವು ಸೇರಿದವರೋ, ಯಾರ ರಕ್ತ ನಮ್ಮ ನಾಡಿಯಲ್ಲಿ ಹರಿಯುತ್ತಿದೆಯೋ ಅವರು, ಅಲ್ಪ ವಿಷಯಗಳಿಗೆ ಹೋರಾಡುತ್ತಿರುವ ನಮ್ಮನ್ನು ನಿಕೃಷ್ಟದೃಷ್ಟಿಯಿಂದ ನೋಡುವರು.

‘‘ನನ್ನ ಮಾತಿನಲ್ಲಿ ನಿಮಗೆ ನಂಬಿಕೆ ಇರುವುದಾದರೆ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಭವ್ಯವಾದ ಭವಿಷ್ಯವಿದೆ. ನಿಮ್ಮಲ್ಲಿ ನಿಮಗೆ ಅಪಾರವಾದ ನಂಬಿಕೆ ಬೆಳೆಯಲಿ. ಮಗುವಾಗಿದ್ದಾಗ ನನ್ನಲ್ಲಿ ಶ್ರದ್ಧೆ ಇತ್ತು. ಅದನ್ನೇ ನಾನು ಈಗ ಅನುಸರಿಸುವೆನು. ಅನಂತಶಕ್ತಿ ಪ್ರತಿ ಜೀವಿಯ ಅಂತರಾಳದಲ್ಲಿ ಇರುವುದು ಎಂಬ ಆತ್ಮಶ್ರದ್ಧೆ ನಿಮ್ಮಲ್ಲಿರಲಿ. ನೀವು ಇಡೀ ಭರತಖಂಡವನ್ನು ಜಾಗೃತಗೊಳಿಸುವಿರಿ. ಆಗ ನಾವು ಜಗತ್ತಿನ ಇತರ ದೇಶಗಳಿಗೆಲ್ಲ ಹೋಗುವೆವು. ಜಗತ್ತಿನಲ್ಲಿ ರಾಷ್ಟ್ರಗಳನ್ನು ನಿರ್ಮಾಣ ಮಾಡುತ್ತಿರುವ ಶಕ್ತಿಯೊಂದಿಗೆ ನಮ್ಮ ಭಾವನೆಯೂ ಮಿಲನವಾಗುವುದು . ಭರತಖಂಡದಲ್ಲಿ ಮತ್ತು ವಿದೇಶಗಳಲ್ಲಿ ಎಲ್ಲಾ ಜನಾಂಗಗಳ ಜೀವನದ ಅಂತರಾಳಕ್ಕೆ ನಾವು ಹೋಗಬೇಕು. ಇದನ್ನು ಸಾಧಿಸುವುದಕ್ಕೆ ಕೆಲಸಮಾಡಬೇಕು. ಆ ಕಾರ್ಯಕ್ಕೆ ನನಗೆ ಯುವಕರು ಬೇಕು.‘‘ಆಶಿಷ್ಠರೂ, ಬಲಿಷ್ಠರೂ, ದೃಢಿಷ್ಠರೂ, ಮೇಧಾವಿಗಳೂ ಆದಂತಹ ಯುವಕರು ಮಾತ್ರ ಭಗವಂತನನ್ನು ಪಡೆಯಬಹುದು’’ ಎಂದು ವೇದ ಸಾರುವುದು. ತಾರುಣ್ಯದ ಶಕ್ತಿ ಇರುವಾಗ ನಿಮ್ಮ ಭವಿಷ್ಯವನ್ನು ನಿರ್ಧರಿಸಬೇಕಾಗಿದೆ. ಮುದುಕರಾಗಿ ಶಕ್ತಿ ಕುಗ್ಗಿದ ಮೇಲೆ ಅಲ್ಲ. ನವತಾರುಣ್ಯದ ಉತ್ಸಾಹದಲ್ಲಿ ಅದನ್ನು ನಿರ್ಧರಿಸಬೇಕಾಗಿದೆ.’’ *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೩, ಪು.೧೬೦-೨೫)*